ಒಡಲುಗೊಂಡವ ಹಸಿವ
ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದು ನೀನೆನ್ನ ಜಡಿದೊಮ್ಮೆನುಡಿಯದಿರಾ !
ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥ.

**ದೇವರ ದಾಸಿಮಯ್ಯ**



ಗಾಢ ಕತ್ತಲನ್ನು ಮೈತುಂಬಾ ಮೆತ್ತಿಕೊಂಡಿದ್ದ ರಾತ್ರಿ ಅದು. ಊರಿನ ದೀಪಗಳೆಲ್ಲ ರೆಪ್ಪೆ ಮುಚ್ಚಿ ಅರೆನಿದ್ದೆಯಲ್ಲಿದ್ದವು. ಅಲ್ಲೊಂದು ಇಲ್ಲೊಂದು ನಾಯಿಗಳ ಬೊಗಳುವಿಕೆ ಬಿಟ್ಟರೆ, ಊರಿನಲ್ಲಿ ಇನ್ನಾವ ಸದ್ದೂ ಕೇಳುತ್ತಿರಲಿಲ್ಲ. ಮಾಗಿ ಕಾಲದ ಶೀತಲ ಗಾಳಿ ಕೊಯ್ಲಾದ ಹೊಲಗಳನ್ನು ಮತ್ತು ಅದರ ಒತ್ತಿಗೆ ಇದ್ದ ಊರಿನ ಮೈಯನ್ನು ತಣ್ಣಗೆ ಕೊರೆಯುವಂತೆ ಮಾಡಿತ್ತು. ಊರಿನ ಇಪ್ಪೆ ತೋಪಿನ ಆಚೆ ಇದ್ದ ಕೊರಚರ ಹಟ್ಟಿಯೂ ಈ ಚಳಿಯಿಂದ ಬಿಡಿಸಿಕೊಂಡಿರಲಿಲ್ಲ. ಇಂತಹ ಅಹೋರಾತ್ರಿಯಲ್ಲಿ ಪೂಜಾರ ಚೌಡಯ್ಯನವರ ದೊಡ್ಡ ಕಣದತ್ತ ಮಾಸ್ತಮ್ಮ ನಡುರಾತ್ರಿಯಲ್ಲಿ ರಾಗಿ ಬೇಟೆಗೆ ಹೊರಟಿದ್ದಳು. ಕಣದಲ್ಲಿ ಮಲಗಿದ್ದವರ ಅರಿವಿಗೆ ಬಾರದಂತೆ ರಾಸಿಯಲ್ಲಿ ಒಂದು ಐದಾರು ಸೇರು ರಾಗಿಯನ್ನು ಹೇಗಾದರೂ ಮಾಡಿ ಕದ್ದು ತರಬೇಕೆಂಬುದು ಅವಳ ಈ ಬೇಟೆಯ ಗುರಿಯಾಗಿತ್ತು. ಈ ರಾಗಿಯಿಂದ ಮೂರು ನಾಲ್ಕು ದಿನವಾದರೂ ತನ್ನ ಕೂಸಿಗೆ ಅಂಬಲಿ ಕುಡಿಸಿ, ತಾನು ಹಿಟ್ಟುಣ್ಣಬಹುದು ಎನ್ನುವ ಆಸೆ ಅವಳನ್ನು ಅಲ್ಲಿಯವರೆಗೆ ಎಳೆದುತಂದಿತ್ತು. ಇದರಿಂದಾಗಿ ಮಾಸ್ತಮ್ಮ